**ಅಸಲು ದಾವಾ ನಂಃ152/2018**
**ಪಿ.ಡಬ್ಲ್ಯೂಃ02**

**<u>ದಿನಾಂಕಃ18-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಶ್ರೀ ಕೆ.ಎಂ.ಎನ್. 1 ನೇ ಪ್ರತಿವಾದಿ ಪರ ವಕೀಲರಿಂದ</u>**

6.ದಾವಾ ನಿವೇಶನವನ್ನು ಚಳ್ಳಕೆರೆಯ ಸರ್ವೇ ನಂಬರ್ 364 ರ ಜಮೀನಿನಲ್ಲಿ ಮಾಡಲಾಗಿದೆ. ಸರ್ವೇ ನಂಬರ್ 364 ಮೂಲತಃ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಸದರಿ ಯವರು ಜಮೀನನ್ನು ದಿನಾಂಕಃ 12.03.1986 ರಂದು ಖರೀದಿ ಮಾಡಿರುತ್ತಾರೆ ಆದರೆ ಯಾರಿಂದ ಎಂದು ಗೊತ್ತಿಲ್ಲ. ಸರ್ವೇ ನಂಬರ್ 361, 364, 276 ರ ಜಮೀನುಗಳ ಮೇಲೆ ಎಸ್.ಪಿ.ಟಿ.ಎಲ್., ಪ್ರಕರಣ ನಡೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣಗಳಲ್ಲಿ ಆದ ಆದೇಶಗಳನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎಸ್.ಪಿ.ಟಿ.ಎಲ್., ಪ್ರಕರಣಗಳಲ್ಲಿ ಮೂಲ ಮಂಜೂರುದಾರರಿಗೆ ಜಮೀನುಗಳು ವಾಪಸ್ಸು ಆಗ ಬೇಕಾಗಿ ಆದೇಶವಾಗಿದ್ದು ಸದರಿ ಆದೇಶವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಅಸಿಸ್ಟೆಂಟ್ ಕಮೀಷನರ್ ಅವರು ಸರ್ವೇ ನಂಬರ್ 361, 364, 276 ರ ಜಮೀನಿಗಳಲ್ಲಿನ ನಿವೇಶನಗಳ ಮಾಲೀಕರಿಗೆ ಹಣ ಸಂದಾಯ ಮಾಡುವಂತೆ ನೋಟಿಸ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ವಾದಿಗೂ ಸಹ ಅದರಂತೆ ನೋಟಿಸ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೋಟಸ್ ಜಾರಿಯಾದ ನಂತರವು ಸಹ ವಾದಿ ಹಣವನ್ನು ಸಂದಾಯಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

7. ದಾವಾ ನಿವೇಶನವನ್ನು ಕೊಂಡು ಕೊಂಡಾಗಿನಿಂದ 2005 ನೇ ಇಸವಿ ವರೆಗೂ ವಾದಿಯ ಹೆಸರಿಗೆ ಖಾತೆಯಾಗಿರಲ್ಲಿಲ ಎಂದರೆ ಸಾಕ್ಷಿಯು 2000 ನೇ ಇಸವಿಯಲ್ಲಿ ಖಾತೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ನಿವೇಶನದ ಖಾತೆಯನ್ನು ದಿನಾಂಕಃ 17.02.2005 ರಲ್ಲಿ ಸರ್ಕಾರದ ಹೆಸರಿಗೆ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 2008-09 ನೇ ಸಾಲ್ಲಿನಲ್ಲಿ 1 ನೇ ಪ್ರತಿವಾದಿ ಅರ್ಜಿಯನ್ನು ಸಲ್ಲಿಸಿ ತನ್ನ ಹೆಸರಿಗೆ ಖಾತೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರಕದ ಹೆಸರಿಗೆ ದಾವಾ ನಿವೇಶನ ಹೋದಾಗ, ವಾದಿಯಾಗಲಿ ಅಥವಾ ವಾದಿಯ ಕುಟುಂಬಸ್ಥರಾಗಲಿ ಯಾರು ಪ್ರಶ್ನಿಸಿಲ್ಲ ಎಂದರೆ ಸರಿ. ದಾವಾ ನಿವೇಶನದಲ್ಲಿ ವಾದಿ ಎಂದಿಗೂ ಸಹ ಸ್ವಾಧೀನದಲ್ಲಿ ಇಲ್ಲದ ಕಾರಣ ಸರ್ಕಾರದ ಹೆಸರಿಗೆ ಮತ್ತು ನಂತರ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ನಿವೇಶನದ ಖಾತೆಯಾದಗ ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

8.ಸರ್ಕಾರದ ಹೆಸರಿನಿಂದ ನಂತರ ತನ್ನ ಹೆಸರಿಗೆ ಖಾತೆಯಾದ ನಂತರ 1 ನೇ ಪ್ರತಿವಾದಿ 2 ನೇ ಪ್ರತಿವಾದಿಂಗೆ ದಾವಾ ನಿವೇಶನವನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ಅವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತನ್ನು ಬಿಟ್ಟು ಕೊಡುವಂತೆ ವಾದಿ 2 ನೇ ಪ್ರತಿವಾದಿಗೆ ನೋಟಿಸ್ ಅನ್ನು ನೀಡಿರುತ್ತಾರೆ. ಸರ್ವೇ ನಂಬರ್ 361, 364, 276 ರ ಜಮೀನಿಗಳಿಗೆ ಸಂಬಂಧಿಸಿದಂತೆ ಅಸಿಸ್ಟೆಂಟ್ ಕಮೀಷನರ್ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ನಿವೇಶನದ ಪೂರ್ವಕ್ಕೆ ನಿವೇಶನ ಸಂಖ್ಯೆ 54 ಇದೆ ಆದರೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ನಿವೇಶನದ ಪಶ್ಚಿಮಕ್ಕೆ ಇರುವ ನಿವೇಶನ ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ದಾವಾ ನಿವೇಶನದ ದಕ್ಷಿಣಕ್ಕೆ ಇರುವ ಜಮೀನು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ.

9. ವಾದಿಯು ದಾವಾ ನಿವೇಶನವನ್ನು ಖರೀದಿಸಿದ ನಂತರ ತಾನು ಕೆಲಸ ಮಾಡುತ್ತಿದ್ದ ಇಲಾಖೆಗೆ ಸದರಿ ಖರೀದಿಯ ಬಗ್ಗೆ ತಿಳಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ನಿವೇಶನವನ್ನು ಖರೀದಿಸಿದ ಬಗ್ಗೆ ವಾದಿ ಆದಾಯ ತೆರಿಗೆ ಇಲಾಖೆಗೆ ತಿಳಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೆ ಹಕ್ಕು ಅಧಿಕಾರ ಇಲ್ಲ ಮತ್ತು ಸ್ವಾಧೀನ ಇರುವುದಿಲ್ಲ ಹಾಗಾಗಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಾವಾ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1989 ರಿಂದ ಈ ದಾವೆಯನ್ನು ಹೂಡುವವರೆಗೂ 1 ಮತ್ತು 2 ನೇ ಪ್ರತಿವಾದಿಗಳ ದಾವಾ ನಿವೇಶನದ ಸ್ವಾಧೀನಾನುಭವಕ್ಕೆ ವಾದಿ ಅಡ್ಡಿ ಆತಂಕ ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಕರ್ತವ್ಯದಲ್ಲಿದ್ದ ಕಾರಣ ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. 1989 ರಿಂದ 2018 ರವರೆಗೂ ರಜೆ ಸಿಕ್ಕಾಗಗಲ್ಲೆಲಾ ವಾದಿ ಚಳ್ಳಕೆರೆಗೆ ಬರುತ್ತಿದ್ದರೂ. ವಾದಿ ವರ್ಷ ಅಥವಾ 2 ವರ್ಷಕ್ಕೊಮ್ಮೆ ಚಳ್ಳಕೆರೆಗೆ ಬರುತ್ತಿದ್ದರು. ವಾದಿ ಪದೇ ಪದೇ ಚಳ್ಳಕೆರೆಗೆ ಭೇಟಿ ನೀಡಿದ್ದರೂ ಸಹ ವರ್ಷಕ್ಕೊಮ್ಮೆ ಭೇಟಿ ನೀಡುತ್ತಿದ್ದರೂ ಎಂದು ಈ ದಾವೆಗೊಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ನಿವೇಶನದಲ್ಲಿ ವಾದಿಗೆ ಯಾವುದೇ ಹಕ್ಕು ಇರದ ಕಾರಣ ಸುಮಾರು 29 ವರ್ಷಗಳ ಕಾಲ 1 ಮತ್ತು 2 ನೇ ಪ್ರತಿವಾದಿಯರಿಗೆ ತೊಂದರೆ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ವಾದಿ 1 ನೇ ಪ್ರತಿವಾದಿಯನ್ನು ಕೇಳಿರುತ್ತಾರೆ ಎಂದು ನುಡಿಯುತ್ತಾರೆ.

10.2012 ಅಥವಾ 2013 ನೇ ಇಸವಿಯಲ್ಲಿ ವಾದಿ 1 ನೇ ಪ್ರತಿವಾದಿಯನ್ನು ದಾವಾ ನಿವೇಶನದ ಸಂಬಂಧ ಪ್ರಶ್ನಿಸಿರುತ್ತಾರೆ. ಸದರಿ ಸಮಯದಲ್ಲಿ ವಾದಿ 1 ನೇ ಪ್ರತಿವಾದಿಗೆ ನೋಟಿಸ್ ಅನ್ನು ನೀಡಿರುವುದಿಲ್ಲ. 2012-13 ನೇ ಸಾಲ್ಲಿನಲ್ಲಿ ವಾದಿ 1 ನೇ ಪ್ರತಿವಾದಿಯ ವಿರುದ್ಧ ದಾವೆಯನ್ನು ಸಲ್ಲಿಸಿರುವುದಿಲ್ಲ. ಚಳ್ಳಕೆರೆ ಪುರಸಭೆ ರವರು ದಾವಾ ನಿವೇಶನದ ಸಂಬಂಧ ವಾದಿ ಯಾವುದೇ ದಾಖಲೆ ನೀಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ನಿವೇಶನದ ಸಂಬಂದ ನನಗೆ

ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 361, 364, 276 ರ ಜಮೀನಿಗಳ ಸಂಬಂಧ ಆದ ಎಲ್ಲಾ ಪ್ರಕರಣಗಳಲ್ಲಿ 1 ನೇ ಪ್ರತಿವಾದಿ ಭಾಗಿಯಾಗಿ ದಾವಾ ನಿವೇಶನ ತನ್ನ ಹೆಸರಿಗೆ ಆದ ನಂತರ ಸದರಿ ನಿವೇಶನವನ್ನು ಲಪಾಟಾಯಿಸುವ ದುರುದ್ದೇಶದಿಂದ ವಾದಿ ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

**(4 ನೇ ಪ್ರತಿವಾದಿಯ ಪರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.